ಶ್ರೀ ವಿ. ಆರ್. ನಾಯ್ಡು.—ಈ ಸ್ಕಾಲರ್‌ಷಿಪ್ ಸಮಿತಿಗಳ ರೀತಿ ನೀತಿಗಳಲ್ಲಿ ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Mr. SPEAKER.—Does not arise.

ಶ್ರೀ ಆರ್. ಅನಂತರಾಮ್.—Lapsed Scholarship ವಿಚಾರದ ತೀರ್ಮಾನವನ್ನು ಆಯಾ ಸಮಿತಿಗೇ ವಹಿಸುತ್ತೀರಾ ಅಥವಾ ಇಲಾಖೆಯ ಡೈರೆಕ್ಟರವರು ವಹಿಸಿಕೊಳ್ಳುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇನೆ.

New Type Middle School Building at Itakadibbanahalli

Q.—582. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) (i) when the application requesting to construct a new type Middle School building at Itakadibbanahalli, Madhugiri Taluk, was received ;

(ii) whether an estimate has been prepared for the same ;

(*b*) the amount sanctioned in this behalf ; the reason for not yet constructing the building ?

A.—Sri A. G. RAMACHANDRA RAO (Minister for Law and Education).—

(*a*) (i) 4th November 1946.

(ii) Yes.

(*b*) The estimate for Rs. 13,200 had to be revised more than once by the Public Works Department authorities and it is still being scrutinised by them.

ಶ್ರೀ ಸಿ. ಟಿ. ಹನುಮಂತಯ್ಯ.—ಈ ನ್ಯೂ ಟೈಪ್ ಮಿಡ್ಲ್ ಸ್ಕೂಲ್ ಕಟ್ಟಡದ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರ ಕೊಟ್ಟಿದೆ. ಈ ಬಗ್ಗೆ ತಯಾರಾಗಿರುವ ಎಸ್ಟಿಮೇಟ್ ಇನ್ನೂ ಪೂರ್ಣ ಪರಿಶೀಲನೆಯಲ್ಲಿದೆ.

Buildings hired by Government.

Q.—348. Sri K. V. BYRE GOWDA (Bangalore North).—

Will the Government be pleased to state :—

(*a*) the amount they are paying by way of rent for the buildings they have taken for rent ;

(*b*) the names of buildings, their addresses, the rent paid for each of them from April 1952 to December 15th, 1953 ?

A.—Sri Kadidal MANJAPPA (Minister for Revenue and Public Works).—

(*a*) Rs. 56,400 per mensem.

(*b*) As this involves consolidation of voluminous material, one set of statements received from the Departments is placed on the Table.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರು ಸಿಟಿಯಲ್ಲಿ ಈ ಬಾಬಿಗಾಗಿ ಮಾಹೆಯಾನ ಎಷ್ಟು ಖರ್ಚು ಮಾಡುತ್ತಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ವಿ. ಬೈರೇಗೌಡ.—ಈ ಪೈಕಿ ಹಲವಾರು ಸರ್ಕಾರಿ ಬಿಲ್ಡಿಂಗ್‌ಗಳನ್ನು ಕ್ಲಬ್‌ಗಳಿಗಾಗಿ ಕೊಟ್ಟಿರುವುದನ್ನು ಬಿಡಿಸಿಕೊಂಡು ಅವುಗಳನ್ನು ಸರ್ಕಾರಿ ನೌಕರರ ಉಪಯೋಗಕ್ಕೆ ವಿನಿಯೋಗಿಸುತ್ತಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ವಿಚಾರ. ಕ್ಲಬ್‌ಗಳಿಗೆ ತಾವು ಹೇಳುವಷ್ಟು ಬಿಲ್ಡಿಂಗ್‌ಗಳನ್ನು ಕೊಟ್ಟಿಲ್ಲ. ಎಲ್ಲೋ ಎರಡು-ಮೂರು ಸನ್ನಿವೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ತಾವು ಹೀಗೆ ಹೇಳುತ್ತಿದ್ದೀರಿ. ತಮ್ಮ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀ ವಿ. ಆರ್. ನಾಯ್ಡು.—ಸ್ವಂತ ಕಟ್ಟಡಗಳನ್ನೇ ಕಟ್ಟಿಸಿಕೊಂಡು ಬಿಟ್ಟರೆ ಸರ್ಕಾರಕ್ಕೆ 54 ಸಾವಿರದ ವರೆಗೆ ಕೊಡುತ್ತಿರುವ ಬಾಡಿಗೆ ಉಳಿಯುತ್ತದಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದೇ ಉದ್ದೇಶದಿಂದಲೇ ಸಾಧ್ಯವಾದಷ್ಟು ಸ್ವಂತ ಕಟ್ಟಡಗಳನ್ನು ಕಟ್ಟಿಸುತ್ತಿರುವುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ನಗರದಲ್ಲಿರುವ ಸರ್ಕಾರದ ಕಟ್ಟಡಗಳ ಪೈಕಿ ಯಾವುದಾದರೂ ಕಟ್ಟಡವನ್ನು ಕ್ಲಬ್‌ಗಳಿಗೆ ಮಾತ್ರವೇ ಅಲ್ಲದೆ ಇತರ ಜನರಿಗೆ ಬಾಡಿಗೆಗೆ ಕೊಟ್ಟಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಏಷಿಯಾಟಿಕ್ ಬಿಲ್ಡಿಂಗ್‌ನಲ್ಲಿ ಕೆಲವರು ಬಾಡಿಗೆಗೆ ಇದ್ದಾರೆ. ಮೊದಲಿನಿಂದ ಇದ್ದಾರೆ. ಅವರನ್ನು ಬಿಡಿಸುವುದು ಕಷ್ಟವಾಗಿದೆ. ಸಾಧ್ಯವಾದ ಕಡೆಗಳಲ್ಲೆಲ್ಲಾ ಬಿಡಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಏಷಿಯಾಟಿಕ್ ಬಿಲ್ಡಿಂಗ್‌ನಿಂದ ಸರ್ಕಾರಕ್ಕೆ ಎಷ್ಟು ಬಾಡಿಗೆ ಬರುತ್ತಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ನಗರದಲ್ಲಿ ಸುಮಾರು 12 ಸಾವಿರ ರೂಪಾಯಿಗಳವರೆಗೆ ಮಾಹೆಯಾನಾ ಬಾಡಿಗೆಯನ್ನು ಸರ್ಕಾರದವರು ಕೊಡುತ್ತಿದ್ದಾರೆ. ಇದನ್ನು ತಪ್ಪಿಸಿಕೊಳ್ಳಲು ಸ್ವಂತ ಕಟ್ಟಡಗಳನ್ನು ಕಟ್ಟಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಕಷ್ಟ. ಅನುಕೂಲವಾದ ಸ್ಥಳ ದೊರಕುವುದು ದುರ್ಲಭ.

ಶ್ರೀ ಜಿ. ಶಿವಪ್ಪ.—ತಮಗೆ ಬಂದಿರುವ ವರದಿಯ ಪ್ರಕಾರ ಯಾವ ಯಾವ ಇಲಾಖೆಯವರು ಬಾಡಿಗೆ ಕೊಡುತ್ತಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರತಕ್ಕ ವರದಿಯ ಪ್ರಕಾರ ರೆವೆನ್ಯೂ ಡಿಪಾರ್ಟ್‌ಮೆಂಟ್, ಪೂಡ್

ಡಿಪಾರ್ಟ್‌ಮೆಂಟ್ ಮತ್ತು ಲ್ಯಾಂಡ್ ರಿಕಾರ್ಡ್ಸ್ ಡಿಪಾರ್ಟ್‌ಮೆಂಟ್—ಇವು ತಿಂಗಳಿಗೆ ಸುಮಾರು 1,200 ರೂಪಾಯಿಗಳು ಬಾಡಿಗೆ ಕೊಡುತ್ತಿವೆ.

ಶ್ರೀ ಜಿ. ಶಿವಪ್ಪ.—ಈ ಬಾಡಿಗೆ ನಿರ್ಧರ ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಅಧಿಕಾರಿಗಳು.

ಶ್ರೀ ಜಿ. ಶಿವಪ್ಪ.—ಈ ವಿಚಾರದಲ್ಲಿ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನಿಂದ ಎಸ್ಟಿಮೇಟ್ ಮಾಡಿಸುತ್ತೀರಾ ಅಥವಾ ಅಂದಾಜಿನ ಮೇಲೆ ನಿರ್ಧಾರ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವಶ್ಯಕತೆ ಕಂಡು ಬಂದರೆ ಮಾತ್ರ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನ ಸಲಹೆ ಕೇಳುತ್ತೇವೆ. ಇಲ್ಲದಿದ್ದರೆ ಸಾಮಾನ್ಯ ತಿಳಿವಳಿಕೆಯ ಮೇಲೆ ನಿರ್ಧರಮಾಡಲಾಗುತ್ತೆ.

ಶ್ರೀ ಪಿ. ವೆಂಕಟಪ್ಪ.—ತಿಂಗಳಿಗೆ ಬಾಡಿಗೆ ರೂಪದಲ್ಲಿ ಬೆಂಗಳೂರು ನಗರದಲ್ಲಿ 12 ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದಾಗಿ ತಿಳಿಸಿದಿರಿ. ಹಿಂದೊಂದು ಬಾರಿ ಈ ವಿಚಾರವಾಗಿ 32 ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದಾಗಿ ಸರ್ಕಾರದವರು ತಿಳಿಸಿದ್ದು ನನ್ನ ಜ್ಞಾಪಕ. ಆದುದರಿಂದ ಯಾವುದು ಸರಿ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಜ್ಞಾಪಕವಿರುವುದನ್ನು ತಿಳಿಸಿರುತ್ತೇನೆ. ಆದರೂ ನಿಖರವಾಗಿ ತಿಳಿಸಲಾರೆ.

ಶ್ರೀ ಪಿ. ಆರ್. ರಾಮಯ್ಯ.—ಮೈಸೂರು ಸರ್ಕಾರದವರು ಸೆಂಟ್ರಲ್ ಗವರ್ನಮೆಂಟಿಗೆ ಯಾವುದಾದರೂ ಆಫೀಸುಗಳನ್ನು ಇಟ್ಟುಕೊಳ್ಳಲು ಕಟ್ಟಡ ಕೊಟ್ಟಿರುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿರುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ಯಾವ ಯಾವ ಆಫೀಸಿಗೆ ಕೊಟ್ಟಿರುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಕೌಂಟೆಂಟ್ ಜನರಲ್ ಆಫೀಸ್, ಇಂಕಂಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಮತ್ತು ಕಾಫಿ ಮಾರ್ಕೆಟಿಂಗ್ ಬೋರ್ಡ್—ಇವುಗಳಿಗೆ ಕೊಟ್ಟಿದೆ.

ಶ್ರೀ ಪಿ. ಆರ್. ರಾಮಯ್ಯ.—ಗವರ್ನಮೆಂಟ್ ಆಫ್ ಇಂಡಿಯಾದವರು ಸ್ವಂತ ಕಟ್ಟಡವನ್ನು ಕಟ್ಟಿಸಿಕೊಳ್ಳಲು ಸಮರ್ಥರಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಮರ್ಥರು ; ಕಟ್ಟಿಸಿಕೊಳ್ಳುತ್ತಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ಇನ್ನೆಷ್ಟು ವರ್ಷಗಳಲ್ಲಿ ಸರ್ಕಾರದವರು ಈ ಬಾಡಿಗೆಗೆ ಕೊಟ್ಟಿರುವ ಕಟ್ಟಡಗಳನ್ನು ಬಿಡುಗಡೆ ಮಾಡಿಸಿಕೊಳ್ಳುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ಧರವಾಗಿ ಹೇಳಲಾರೆ. ಅಕೌಂಟೆಂಟ್ ಜನರಲ್ ಆಫೀಸಿನ ಕಟ್ಟಡ ತಯಾರಾಗುತ್ತಿದೆ ; ಅದು ಪೂರ್ತಿಯಾದ ಮೇಲೆ ಅವರು ಅಲ್ಲಿಗೆ ಹೋಗುತ್ತಾರೆ.

ಶ್ರೀ ಎಸ್. ಸಿದ್ದಪ್ಪ.—ಬೆಂಗಳೂರು ಪಟ್ಟಣದಲ್ಲಿ ಹಾಲಿ ಸರ್ಕಾರದಿಂದ ಬಾಡಿಗೆ ಪಾವತಿಯಾಗುತ್ತಿರುವ ಕಟ್ಟಡಗಳ ಪೈಕಿ ಎಷ್ಟು ಕಟ್ಟಡಗಳಿಗೆ ಬಾಡಿಗೆ ಪಾವತಿ ಆಗಿಲ್ಲ ಎಂಬುದನ್ನು ಸರ್ಕಾರದವರು ತಿಳಿದುಕೊಂಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಅದನ್ನು ತಮ್ಮ ಗಮನಕ್ಕೆ ತಂದರೆ ಆ ಬಾಡಿಗೆಯ ಪೂರ್ತವನ್ನು ಕೊಡಿಸುವುದಕ್ಕೆ ಪ್ರಯತ್ನಮಾಡುತ್ತೀರಾ ?

Mr. SPEAKER.—That is hypothetical.

ಶ್ರೀ ಎಸ್. ಸಿದ್ದಪ್ಪ.—ಏಷಿಯಾಟಿಕ್ ಇಕ್ವಿಪ್ಮೆಂಟ್ಸ್ ಕಂಪೆನಿ ಕಟ್ಟಡ ತಮ್ಮ ವಶಕ್ಕೆ ಬಂದದ್ದು ಯಾವಾಗ ?

Mr. SPEAKER.—These are too many details.

ಶ್ರೀ ಎಸ್. ಸಿದ್ದಪ್ಪ.—ಬೆಂಗಳೂರು ಪಟ್ಟಣದಲ್ಲಿ ಸರ್ಕಾರದ ನಾನಾ ಇಲಾಖೆಗಳ ಕಟ್ಟಡಗಳು ಪ್ರತ್ಯೇಕ ಪ್ರತ್ಯೇಕವಾಗಿರತಕ್ಕದ್ದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಎಸ್. ಸಿದ್ದಪ್ಪ.—ಇವೆಲ್ಲವನ್ನೂ ಒಂದು ಗೂಡಿಸಬೇಕೆಂದು ತಮ್ಮಲ್ಲಿ ಜನಗಳು ಅರಿಕೆಮಾಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಹೇಳಿದ್ದಾರೆ

ಶ್ರೀ ಎಸ್. ಸಿದ್ದಪ್ಪ.—ಈಗ ಇರತಕ್ಕ ಈ ಅನಾನುಕೂಲವನ್ನು ಪರಿಹರಿಸುವ ಉದ್ದೇಶದಿಂದಲೇ ವಿಧಾನ ಸೌಧವನ್ನು ಕಟ್ಟುತ್ತಿರುವುದು ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಒಂದುಕಾರಣ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬೆಂಗಳೂರು ಸಿಟಿಯಲ್ಲಿ ಇಂಡಿಯಾ ಸರ್ಕಾರದವರು ಮೈಸೂರು ಸರ್ಕಾರದ ಕಟ್ಟಡವನ್ನು ಉಪಯೋಗಿಸುತ್ತಾ ಇದ್ದಾರೆಯಲ್ಲಾ ಅದಕ್ಕೆ ಬಾಡಿಗೆ ಕೊಡುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡುತ್ತಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಎಷ್ಟು ಬರುತ್ತಾ ಇದೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಂಕಿಅಂಶ ತಕ್ಷಣ ಕೊಡುವುದಕ್ಕೆ ಸಾಧ್ಯವಿಲ್ಲ.

Expert Committee to examine large P. W. D. Estimates.

Q.—488. **Sri N. HUCHMASTHY GOWDA** (Huliyurdurga).—

Will the Government be pleased to state :—

(*a*) whether there is an expert committee in the State to examine the large estimates prepared by the P. W. D. ;

(*b*) when this committee was constituted ;

(*c*) the number of estimates referred to this committee for examination ;

(*d*) the number of estimates finalised and what are they ;

(*e*) the amount spent on this committee ?

A.—**Sri Kadidal MANJAPPA** (Minister for Revenue and Public Works).—

(*a*) Yes.